ಆದರೆ ಹೆಣ್ಣು ಹೆತ್ತ ಜವಾಬ್ದಾರಿ ಎಲ್ಲರ ಹಾಗೆ ನನಗೂ ಇದೆಯಲ್ಲ. ಏನು ಮಾಡಲಿ? ಎಂದು ಅಪ್ಪ ನೋವಲ್ಲಿ– ಅಸಹಾಯಕತೆಯಲ್ಲಿ ಹೇಳಿದಾಗ ಪಿಚ್ಚೆನ್ನಿಸಿತು. ನಾನು, ಎಷ್ಟೆಲ್ಲ ಕಠಿಣ ಆಘಾತಗಳಿಗೆ ಬಲಿಯಾಗಿ ನಲುಗಿದ್ದರೂ ನನ್ನ ಕನಸುಗಳ ಗೋಪುರವ ಬೀಳಿಸಲು ಸಿದ್ಧಳಿಲ್ಲದ ನಾನೂ ಅಂದು ನನ್ನ ನಿರ್ಧಾರ ಬದಲಿಸಿದೆ – ಅಪ್ಪನಿಗಾಗಿ.

ಕೆಲವೇ ದಿನಕ್ಕೆ ಅಪ್ಪನ ತೋಟದಲ್ಲಿ ನನ್ನ ಕೈನೀರು ಹನಿಸಿ ಬೆಳೆಸಿದ ಮಲ್ಲಿಗೆ ಹಂದರದಲ್ಲೇ ನನ್ನ ಮದುವೆಯ ಹಂದರವನ್ನು ಹಾಕಿದ್ದರು. ನಾನು ಯಾವುದಕ್ಕೂ ತಿರಸ್ಕರಿಸದೆ ಹೊಂದಿಕೊಂಡಿದ್ದೆ. ಮುಖ್ಯವಾಗಿ ಅಕ್ಕರೆಯುಣಿಸಿದ, ಅಕ್ಷರ ಕಲಿಸಿದ ಅಪ್ಪ ಅಮ್ಮ ನೊಂದುಕೊಳ್ಳದೆ ಸಂತಸದಿಂದಿರುವುದಾರೆ ನಾನೇನೂ ಮಾಡಲು ಮನಸ್ಸನ್ನು ಸಿದ್ಧಪಡಿಸಿಕೊಂಡಿದ್ದೆ.

★★★

ಕನಸಿನ ಲೋಕದಲ್ಲಿ ತಾರಕದಲ್ಲಿದ್ದ ವೀಣೆಯ ಝೇಂಕಾರ ತಟ್ಟನೆ ನಿಂತುಹೋದಾಗ ಅವಸರಿಸುವ ಅಪಶಕುನದ ಮೌನದಂತೆ ಅನ್ನಿಸಿತು ನನಗೆ. ನನ್ನ ಹೊಸಮನೆ, ಅಪ್ಪನ ಚಿಕ್ಕ ಮನೆ ನೀರೆರೆದು ಬೆಳಸಿದ ಮಲ್ಲಿಗೆ ಬಳ್ಳಿ (ಈಗ ಆ ಬಳ್ಳಿಗೆ ನೀರೆರೆಯುತ್ತಾರೆ. ಯಾರಲ್ಲಿ?) ತೋಟಗಳಲ್ಲೆಲ್ಲ ಜಿಂಕೆಮರಿಯಂತೆ ನೆಗೆಯುತ್ತಿದ್ದ; ವೀಣೆ ನುಡಿಸುತ್ತ ನನ್ನ ಕಲ್ಪನೆಯ ಲೋಕವನ್ನು ಕಣ್ಣೆದುರಲ್ಲಿ ಸೃಷ್ಟಿಸಿಕೊಳ್ಳುತ್ತಿದ್ದ ನಾನು ಇಲ್ಲಿ ಸಂಪೂರ್ಣ ಏಕಾಂಗಿಯಾಗಿ ಬಿಟ್ಟೆನೆನಿಸಿತು. ಹಳ್ಳಿಯಲ್ಲಿನ ಹಾಗೆ ಇಲ್ಲಿ ಮನೆಗೆ ಉಪ್ಪರಿಗೆ ಇಲ್ಲ. ಇದ್ದರೂ ನಕ್ಷತ್ರ ಖಚಿತ ಆಕಾಶ. ಚಂದ್ರ ನಿಚ್ಚಳವಾಗಿ ಕಾಣುವುದಿಲ್ಲ. ಕಂಡರೂ ಅದರ ಸೊಬಗನ್ನು ಕಣ್ಣಮುಂದೆ – ಕೈಚಾಚಿದರೆ ಸಿಗುವ ದೂರದಲ್ಲಿರುವಂತೆ ಬಣ್ಣಿಸುತ್ತಿದ್ದ ಅಪ್ಪನಿರಲಿಲ್ಲ. ಮನೆಯಲ್ಲೆಲ್ಲ ಮೌನಿಗಳು. ಯಾವಾಗಲೂ ನದಿಯ ಜುಳು ಜುಳುವಿನಂತೆ ಅಪ್ಪನೊಂದಿಗೆ ಮಾತಾಡುತ್ತಿದ್ದ ಸುನಯನಳ ಮಾತುಗಳಿಗೆಲ್ಲ ಯಾರೊ ಒಡ್ಡು ಕಟ್ಟಿದಂತಾಗಿಬಿಟ್ಟಿತ್ತು. ಅಪ್ಪನ ಮನೆಯಿಂದ ನನ್ನೊಂದಿಗೆ ತಂದ 'ಸ್ವರ' ಮಾತ್ರ ನನ್ನ ಜತೆಗಾತಿ. ಯಾವಾಗಲೂ ನಾನೂ ಬೆರಳುಗಳನ್ನು ಮನೆಯ ಮೇಲಿಟ್ಟು ಸ್ವರ ಹೊರಡಿಸಿ ಅದರೊಂದಿಗೆ ಮಾತನಾಡುತ್ತಿದ್ದೆ. ಆದರೂ – ಆ ರಾಗಗಳಿಗೆ, ಆ ಸ್ವರಗಳಿಗೆ ಅಪ್ಪನ ಮನೆಯಲ್ಲಿದ್ದ ಮಾಧುರ್ಯವಿಲ್ಲ. ಅಲ್ಲಿ – ಮನೆಯ, ಪ್ರತಿ ಜಾಗ, ಪ್ರತಿ ಕೋಣೆಯೊಳಗೂ ವೀಣೆ ಸ್ವರ, ಜತಿ, ರಾಗ, ನಾನು ಉಪ್ಪರಿಗೆಗೆ ನಿಂತು ನನ್ನ ಕಣ್ನೋಟದಿಂದಲೇ ಬಯಲಿನಲ್ಲೂ ವೀಣೆಯ ಸ್ವರ ಹೊರಡಿಸುತ್ತಿದ್ದೆ. ಮನೆಯ ಗೂಡು, ಜಗುಲಿ, ಬಾಗಿಲ ಅಗುಳಿ ಎಲ್ಲಿ ನನ್ನ ಬೆರಳಿಟ್ಟರೂ ಸರಿಗಮ ಸ್ವರ ತಾಳ–ಮಂದ್ರ. ತಾರಕ...

ನನ್ನ ಪತಿ ತುಂಬ ಒಳ್ಳೆಯವರು. ಯಾರಿಲ್ಲದಿದ್ದಾಗ ಇರುವವನನ್ನೇ ಇಷ್ಟವಿಲ್ಲದಿದ್ದರೂ ಸರಿ, ಪ್ರೀತಿಸಿದರೆ ಬದುಕು ಸಹ್ಯವಾಗುತ್ತದೆಂದು ಅಪ್ಪ ಹೇಳಿದ್ದರಲ್ಲ, ಆ ಮಾತನ್ನು ಅಕ್ಷರಶಃ ಪಾಲಿಸಲು ಯತ್ನಿಸಿದೆ. ಪ್ರೇಮದರಾಗ ಹೊರಹೊಮ್ಮಿಸಲು, ನಾನೇ ವೀಣೆಯಾಗಿ ಪರವಶಳಾಗಲು ಯತ್ನಿಸಿದೆ. ವೀಣೆ ನುಡಿಸುತ್ತ ಜಾರಿಹೋಗುತ್ತಿದ್ದ ಬಾಲ್ಯದ ಕನಸಿನ ಲೋಕವನ್ನು ಕಟ್ಟಿಹಾಕಿ ಅದೇ ವಾಸ್ತವವೆಂದು ತಿಳಿಸಲು ಪ್ರಯತ್ನಪಟ್ಟೆ.

ಪ್ರಿಯ ಚೈತ್ರ, ಸಂಗೀತ, ಭಾವೋನ್ಮಾದ ಉಕ್ಕಿಸುವ ಪ್ರೀತಿ, ಕವಿತೆ, ಭಯಾನಕ ಯುದ್ಧ ನನ್ನ ನೆಚ್ಚಿನ – ಮೆಚ್ಚಿನ ವಿಷಯಗಳಾಗಿದ್ದವು. ಎಂಥ ವಿಚಿತ್ರ ಹೆಣ್ಣಿವಳು ಎಂದುಕೊಳ್ಳಬೇಡ. ನನ್ನ ತಾರುಣ್ಯದ ಸುಕೋಮಲ ಭಾವನೆಗಳು ಅರಳುವ ಸಮಯದಲ್ಲಿ ಅಪ್ಪ ಒಮ್ಮೆ ಕಾದಂಬರಿಯೊಂದನ್ನು ನನಗೆ ತಂದುಕೊಟ್ಟಿದ್ದ. ಅದರ ಕಥಾನಾಯಕಿಗೂ ಇಂಥವೇ ಹುಚ್ಚು